ಇಷ್ಟ್ ದಿನ ಚಾಕ್ರಿ ಮಾಡಿಸ್ಕಂಡ್ ಕಿತ್ತಾಕಿದ್ರಾ ಅಕ್ಕಯ್ಯಮ್ಮ. ಅದ್ರಿಂದೆ ಏನೇನು ರಾಜಕೀಯ ಐತೊ ಬಿಡತ್ಲಾಗೆ.'' ``ಆ ಹನುಮಂತಪುರದ ಸಾಕಮ್ಮ ಬಲು ಐನಾತಿ ಹೆಣ್ಣು, ಅವಳ ಒನ್ಪುವೈಯ್ಯಾರ ನೋಡ್ಬೇಕು. ಯಾರೊ ಅವಳ ತೌರ್‌ಮನೆ ಕಡೇನು ತಾಲ್ಲೂಕು ಆಪೀಸಿನಾಗೆ ಅವ್ನಂತೆ. ಅವುಂದೆ ಎಲ್ಲಾ ಕರಾಮತ್ತಂತೆ. ಅವ್ನು ಬಂದ್ರೆ ಸಾಕಮ್ಮನ ಗಂಡ ದಿನಪೂರ್ತಿ ಮನೆಲಿರಲ್ವಂತೆ. ಅದೆಂಗಾದ್ರಾಗ್ಲಿ ಅವಳಿಂದ ನಿಂಗನ್ಯಾಯ ಆಯ್ತು ನೋಡು ಅಕ್ಕಯ್ಯಮ್ಮ. ನಿನ್ ನೋಡಿ ನಂಗೆ ಹೊಟ್ಟೆ ಉರಿತೈತೆ.'' ಮುಂತಾಗಿ ಸಂತಾಪಗಳನ್ನು ಸೂಚಿಸಿದ್ದರು. ಅದಕ್ಕೆಲ್ಲ ಅಕ್ಕಯ್ಯಮ್ಮ ನಗುತ್ತಾ, ``ಅಯ್ಯೋ ಅದೇನು ಸರ್ವೆಯರ್ ಕೆಲ್ಸಾನೊ, ದಪೆದಾರ್ ಕೆಲ್ಸಾನೊ ತಗೊಳ್ರಿ. ಹುಡುಗ್ರಿಗೆ ಊಟ ಬಡ್ಸೋದು, ಅವ್ರು ಹೇತ್ರೆ ಬಾಚಾಕಿ ತಿಕ ತೊಳ್ಯೋದು. ಕೆಲಸದಿಂದ ತೆಗೆದಿದ್ದು ನಂಗೊಂದಿಷ್ಟೂ ಬೇಜಾರಿಲ್ಲ.'' ಎಂದು ಉತ್ತರಿಸಿ ಸಂತಾಪ ಸೂಚಿಸಿದವರ ಹೊಟ್ಟೆಯನ್ನೇ ಉರಿಸಿದ್ದಳು.

ಆವೊತ್ತು ರಾತ್ರಿ ಅಕ್ಕಯ್ಯಮ್ಮನಿಗೆ ಸರಿಹೊತ್ತಾದ್ರೂ ನಿದ್ದೆ ಬಂದಿರ್ಲಿಲ್ಲ. ಅಂಗನವಾಡಿ ಕೆಲಸ ಕಳೆದುಕೊಂಡಿದ್ದು ಅಂಥ ದೊಡ್ಡ ನಷ್ಟ ಅನ್ನಿಸದಿದ್ದರೂ ಮನದ ಮೂಲೆಯಲ್ಲೆಲ್ಲೋ ತನಗೆ ಅವಮಾನವಾದಂತೆ ಶಂಕೆ. ತಾನು ಅಡುಗೆ ಸಹಾಯಕಳಿಗೆ ಅಸಿಸ್ಟೆಂಟ್ ಆಗಿದ್ದರೂ ಎಷ್ಟೋ ದಿನ ತಾನೇ ಅಂಗನವಾಡಿಯಲ್ಲಿ ಕಂಪ್ಲೀಟ್ ಅಡುಗೆಯನ್ನು ಮಾಡುತ್ತಿದ್ದಳು. ಮೇಡಂ ಸರೋಜಮ್ಮನಂತೂ ``ಅಕ್ಕಯ್ಯಮ್ಮ ನಿನ್ನ ಕೈ ರುಚಿ ತುಂಬಾ ಚನ್ನಾಗೈತೆ, ಅದೇನೋ ಹೇಳ್ತಾರಲ್ಲ ಗಾದೆ; ಹಲ್ಲಿರೋರ್ಗೆ ಕಡ್ಲೆ ಇರಲ್ಲ, ಕಡ್ಲೆ ಇರೋರ್ಗೆ ಹಲ್ಲಿರಲ್ಲ ಅಂಬೋದು ಎಷ್ಟ್ ನಿಜ ನೋಡು.'' ಎಂದು ಅಕ್ಕಯ್ಯಮ್ಮ ಅಡುಗೆ ಮಾಡಿದ ದಿನ ಹೊಟ್ಟೆ ತುಂಬಾ ತಿಂದು ಬಾಯಿ ತುಂಬಾ ನೆಕ್ಕುತ್ತಿದ್ದಳು. ಅಂಥ ಸರಿ ರಾತ್ರಿಯಲ್ಲಿ ಅಕ್ಕಯ್ಯಮ್ಮನ ಮನಸ್ಸಿನಲ್ಲಿ ಒಂದು ಸಡನ್ ಆಲೋಚನೆ ಹುಟ್ಟಿಕೊಂಡಿತ್ತು. ಊರಲ್ಲಿ ಪಕೋಡ ಕಾಫಿ ಅಂಗಡಿ ಇಟ್ಟುಕೊಂಡರೆ ಹೇಗೆ ಎಂಬುದು. ಅಕ್ಕಯ್ಯಮ್ಮನ ಅಜ್ಜಿ ಸುಗ್ಗಿ ಕಾಲದಲ್ಲಿ ಪಕೋಡ ಮಾಡಿಕೊಂಡು ಕಣಗಳ ಹತ್ತಿರ ಹೋಗಿ ಅರ್ಧ ಗಂಟೆಯಲ್ಲಿ ಪಕೋಡಗಳನ್ನು ಮಾರಿಕೊಂಡು ತಿತ್ತಿ ತುಂಬಾ ಚಿಲ್ಲರೆ ಕಾಸನ್ನು ತುಂಬಿಕೊಂಡು ಬರುತ್ತಿದ್ದಳು. ಪಕೋಡಕ್ಕೆ ಹಾಕಿದ ಖರ್ಚಿನ ಎರಡು ಪಾಲು ಲಾಭವನ್ನು ತರುತ್ತಿದ್ದಳು. ಎಷ್ಟೋ ವರ್ಷಗಳ ಮೇಲೆ ಅಜ್ಜಿಯ ಪಕೋಡ ಸಂಗತಿ ನೆನಪಾಗಿತ್ತು. ಆದರೆ, ಊರಲ್ಲಿ ಆಗಲೇ ಪೊಲೀಸ್ ನಂಜುಂಡ ಮತ್ತು ತಗ್ಗಳ್ಳಿ ಸೀನಪ್ಪ ಪಕೋಡ ಅಂಗಡಿ ಇಟ್ಟು ಸಾಲ ಕೊಟ್ಟು ಕೊಟ್ಟು ವಸೂಲಿ ಮಾಡಲಾಗದೆ ಅಂಗಡಿ ಮುಚ್ಚಿದ್ದರು. ಅದೂ ಅಲ್ಲದೆ ಹಳ್ಳಿಯಲ್ಲಿ ಎಲ್ಲಾ ಮನೆಗಳಲ್ಲೂ ಹೆಂಗಸರೂ ಕಡಲೆ ಹಿಟ್ಟು, ಎಣ್ಣೆ ತರಿಸಿ ಅರ್ಧ ಗಂಟೆಯಲ್ಲಿ ಪಕೋಡ ಮಾಡುವ ವಿದ್ಯೆಯನ್ನು ಕಲಿತಿದ್ದರು. ಹಾಗಾಗಿ, ಪಕೋಡದಂಗಡಿ ಇಟ್ಟರೆ ಪ್ರಯೋಜನವಿಲ್ಲವೆಂದು ತೀರ್ಮಾನಕ್ಕೆ ಬಂದ ಘಳಿಗೆಯಲ್ಲೇ ಅಕ್ಕಯ್ಯಮ್ಮನ ಮೆದುಳಿನಲ್ಲಿ ಆಮ್ಲೇಟ್ ಅಂಗಡಿ ಐಡಿಯಾ ಹುಟ್ಟಿಕೊಂಡಿತ್ತು. ಈ ಆರು ತಿಂಗಳ ಹಿಂದೆ ಅಂಗನವಾಡಿ ಕಾರ್ಯಕರ್ತರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಒಂದು ದಿನದ ಉಪವಾಸ ಸತ್ಯಾಗ್ರಹ ಮಾಡಿದಾಗ ಮೇಡಂ ಸರೋಜಮ್ಮ ಜೊತೆಗಿರಲಿ ಎಂದು ಅಕ್ಕಯ್ಯಮ್ಮನನ್ನೂ ಕರೆದುಕೊಂಡು ಹೋಗಿದ್ದಳು.

ಬೆಂಗಳೂರಿನ ಯಶವಂತಪುರದಲ್ಲಿ ಸರೋಜಮ್ಮನ ದೊಡ್ಡಪ್ಪನ ಮನೆ ಇದ್ದಿದ್ದರಿಂದ ಉಳಿದುಕೊಳ್ಳಲು ತೊಂದರೆ ಇರಲಿಲ್ಲ. ಹಾಗಾಗಿ, ಹಿಂದಿನ ದಿನ ಸಂಜೆಯೇ ಬೆಂಗಳೂರು ಸೇರಿಕೊಂಡಿದ್ದರು.

ಮಾರನೆಯ ಬೆಳಗ್ಗೆ ಎಂಟು ಗಂಟೆಗೆಲ್ಲ ಉಪ್ಪಿಟ್ಟು ತಿಂದು, ಒಂಬತ್ತು ಗಂಟೆಗೆಲ್ಲ ಸ್ವಾತಂತ್ರ್ಯ ಉದ್ಯಾನವನ ಸೇರಿಕೊಂಡಿದ್ದರು. ಆ ಜನ ನೋಡಿ ಅಕ್ಕಯ್ಯಮ್ಮನಿಗೆ ಒಂಥರಾ ಖುಷಿಯೇ ಆಗಿತ್ತು. ಹತ್ತು ಗಂಟೆಗೆ ಶುರುವಾದ ಉಪವಾಸ ಸತ್ಯಾಗ್ರಹ ಸಂಜೆ ಏಳು ಗಂಟೆಗೆ ಮುಗಿದಿತ್ತು. ಸರ್ಕಾರದ ಪರವಾಗಿ ಯಾರೋ ಬಂದು ಆಶ್ವಾಸನೆ ಕೊಟ್ಟಿದ್ದರು. ಯಶವಂತಪುರಕ್ಕೆ ಬಸ್ಸು ಹತ್ತಲು ಮೆಜೆಸ್ಟಿಕ್